## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಕೆ.ಸೋಮಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು) ಮತ್ತು ಶ್ರೀ ಹೆಚ್.ಸಿ.ರಾಜಣ್ಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, (ಹಾಲಿ ಕಾರ್ಯದರ್ಶಿ ಗ್ರೇಡ್-1, ಪ್ರಭಾರ ಗೋಪಾಲಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ) ಶ್ರೀರಾಂಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ: Compt/Uplok/MYS-2318/2016/ಡಿಆರ್‌ಇ-4, ದಿನಾಂಕ: 09.05.2017

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3)ರ ಅಡಿಯಲ್ಲಿ ಸಲ್ಲಿಸಿರುವ 26-04-2017 ರ ವರದಿಯಲ್ಲಿ ದೂರುದಾರರಾದ ಶ್ರೀ ಕಪನಿ ಬಿನ್ ಲೇಟ್ ಮಧು ಮನೆ ನಂ.530 "ಬಿ" ಬ್ಲಾಕ್, 3ನೇ ಕ್ರಾಸ್, ಮಾನಂದವಾಡಿ ರಸ್ತೆ, ಮಹದೇವಪುರ ಮೈಸೂರು ಇವರು ಶ್ರೀರಾಂಪುರ ಗ್ರಾ.ಪಂ. ವ್ಯಾಪ್ತಿಯ ಮಹದೇವಪುರ ಗ್ರಾಮದ ಜಂಜರು ನಂ.2423, ಸ್ವತ್ತಿನ ನಂ. 149/2ಬಿ, ನಿವೇಶನ ನಂ.5, ಅಳತೆ 60*50 ಅಡಿಗಳು ದೂರುದಾರರಿಗೆ ಸೇರಿದ್ದಾಗಿರುತ್ತದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನೀಡಲಾಗಿರುವ ಫಾರಂ 11-ಬಿ ರಲ್ಲಿ ಸ್ವತ್ತಿನ ಸಂಖ್ಯೆಯನ್ನು ತಪ್ಪಾಗಿ ನಮೂದಿಸಿರುತ್ತಾರೆಂದು ಸದರಿ ತಪ್ಪನ್ನು ಸರಿ ಮಾಡಿಕೊಡುವಂತೆ ದಿ :08-08-2016 ರಂದು ಕೋರಲಾಗಿ ತಪ್ಪಾಗಿ ನಮೂದಿಸಿರುವ ಫಾರಂ ನಂ. 11-ಬಿ ಯಲ್ಲಿಯೇ ತಿದ್ದುಪಡಿ ಮಾಡಿಕೊಡುವುದಾಗಿ, ಹೊಸದಾಗಿ 11-ಬಿ ಕೊಡುವುದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೇ ಗ್ರಾ.ಪಂ.ಗೆ ಬಂದು ಕೇಳಿದಲ್ಲಿ ದೂರುದಾರರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ಬೆದರಿಕೆ ಹಾಕಿರುತ್ತಾರೆಂದು ಈ ಬಗ್ಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಲಾಗಿ ಸದರಿಯವರು ದೂರು ಸ್ವೀಕರಿಸಲು ನಿರಾಕರಿಸಿರುತ್ತಾರೆಂದು ಆರೋಪಿಸಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ದೂರುದಾರರ ದೂರಿಗೆ ಸಂಬಂಧಿಸಿದಂತೆ, 1 ಮತ್ತು 2ನೇ ಎದುರುದಾರರುಗಳು ದಿನಾಂಕ: 02/11/2016 ರಂದು ಒಂದೇ ರೀತಿಯ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳಲ್ಲಿ, ದೂರುದಾರರ ಕೋರಿಕೆಯಂತೆ ಕಡತವನ್ನು ಪರಿಶೀಲಿಸಲಾಗಿ, ಶ್ರೀರಾಂಪುರ ಸರ್ವೆ ನಂ.149/2ಬಿ ರಲ್ಲಿ 0.19 ಗುಂಟೆ ಜಮೀನು ದೂರುದಾರರ ತಂದೆಯಾದ ಮಾಧು ಬಿನ್ ಕಪನಯ್ಯ ರವರಿಗೆ ಸೇರಿರುವುದಾಗಿ ಆರ್.ಟಿ.ಸಿ.ಯಲ್ಲಿ ದಾಖಲಾಗಿರುತ್ತದೆ. ಹಾಗೂ ಮಾಧು ಬಿನ್ ಕಪನಯ್ಯ ರವರ ಪತ್ನಿ ಮಾದಮ್ಮ ಎಂಬುವವರಾಗಿರುತ್ತಾರೆಂದು, ಇವರಿಗೆ ಒಟ್ಟು 7 ಜನ ಮಕ್ಕಳಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಶ್ರೀ ಮಾಧು ಬಿನ್ ಕಪನಯ್ಯ ರವರು ಮರಣ ಹೊಂದಿದ ನಂತರ, ಮೇಲ್ಕಂಡ 0.19 ಗುಂಟೆ ಜಮೀನು ಅವರ ಪತ್ನಿಯಾದ ಶ್ರೀಮತಿ ಮಾದಮ್ಮ ರವರ ಹೆಸರಿಗೆ ಮ್ಯುಟೇಷನ್ ಆಗಿರುವುದಿಲ್ಲ, ಸಂಗತಿಗಳೆಲ್ಲಾ ಹೀಗಿರುವಾಗ ಶ್ರೀಮತಿ ಮಾದಮ್ಮ ರವರು ನೋಂದಾವಣಿಯಾಗದ ದಾನ ಪತ್ರದ ಮುಖಾಂತರ ದಿನಾಂಕ: 20/04/2010 ರಂದು 7 ಜನ ಮಕ್ಕಳ ಪೈಕಿ ದೂರುದಾರರ ಒಬ್ಬರ ಹೆಸರಿಗೆ ಮಾತ್ರ ಉಳಿದ 6 ಜನ ಮಕ್ಕಳ ಸಹಿಯನ್ನು ಪಡೆಯದೇ, ಏಕಾಏಕಿಯಾಗಿ 19 ಗುಂಟೆ ಪೈಕಿ ಪೂರ್ವ-ಪಶ್ಚಿಮ 50 ಅಡಿಗಳು, ದಕ್ಷಿಣ-ಉತ್ತರ 60 ಅಡಿಗಳುಳ್ಳ ಜಾಗ ಮತ್ತು ಈ ಜಾಗದಲ್ಲಿ ಕಟ್ಟಿರುವ 5 ಚದರ ಕಲ್ನಾರ್ ಶೀಟಿನ ಮನೆಯನ್ನು ದಾನವಾವಾಗಿ ದೂರುದಾರರ ಹೆಸರಿಗೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ದೂರುದಾರರಿಗೆ ಕಳುಹಿಸಿ, ಪ್ರತ್ಯುತ್ತರವನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, ದೂರೂದಾರರು ಈ ಕಛೇರಿಯಿಂದ ಕಳುಹಿಸಲಾದ ನೋಟೀಸ್‌ನ್ನು ಸ್ವೀಕರಿಸಿದರೂ ಸಹಾ, ಯಾವುದೇ ಪ್ರತ್ಯುತ್ತರವನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕಣದಲ್ಲಿ ದೂರುದಾರರ ಉತ್ತರಗಳೇನೂ ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

ಈ ಸಂಬಂಧವಾಗಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಗ್ರೇಡ್-1 ಗ್ರಾಮ ಪಂಚಾಯತಿ ಕಾರ್ಯದರ್ಶಿ, ಶ್ರೀರಾಂಪುರ ಗ್ರಾಮ ಪಂಚಾಯತಿ ರವರಿಂದ, ದೂರುದಾರರ ಹೆಸರಿಗೆ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂನೆ 11ಬಿ ಯನ್ನು ವಿತರಿಸಿರುವ ಕಾರ್ಯದರ್ಶಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಬಗ್ಗೆ ಮಾಹಿತಿಯನ್ನ ಸಲ್ಲಿಸುವಂತೆ ತಿಳಿಸಿಲಾಗಿ, ಸದರಿಯವರು (1) ಶ್ರೀ ಕೆ.ಸೋಮಯ್ಯ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಶ್ರೀರಾಂಪುರ ಗ್ರಾಮ ಪಂಚಾಯತಿ, ಮೈಸೂರು ಜಿಲ್ಲೆ (ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು) ಹಾಗೂ, (2) ಶ್ರೀ ಹೆಚ್.ಸಿ.ರಾಜಣ್ಣ, ಹಿಂದಿನ ದ್ವಿತೀಯಾ ದರ್ಜೆ ಸಹಾಯಕರು, ಶ್ರೀರಾಂಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಕಾರ್ಯದರ್ಶಿ ಗ್ರೇಡ್-1, ಪ್ರಭಾರ ಗೋಪಾಲಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ) ಎಂದು ತಿಳಿಸಿರುತ್ತಾರೆ. ಆದ್ದರಿಂದ, ಸದರಿ ಇಬ್ಬರು ಅಧಿಕಾರಿಗಳನ್ನು ಗೌರವಾನ್ವಿತ ಉಪಲೋಕಾಯುಕ್ತರು 4 ಮತ್ತು 5ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ನಮೂದಿಸಿ ನಂತರ, ಈ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ 4 ಮತ್ತು 5ನೇ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ.

ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರು ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 4 ಮತ್ತು 5ನೇ ಎದುರುದಾರರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ದೂರುದಾರರ ತಂದೆಯಾದ ಶ್ರೀ ಮಾಧು ಬಿನ್ ಕಪನಯ್ಯ ರವರ ಹೆಸರಿನಲ್ಲಿ ಶ್ರೀರಾಂಪುರ ಗ್ರಾಮದ ಸರ್ವೆ ನಂ. 149/2ಬಿ ರಲ್ಲಿ ಒಟ್ಟು 0.19 ಗುಂಟೆ ಜಮೀನು ಇರುತ್ತದೆ.
- ಶ್ರೀ ಮಾಧು ಬಿನ್ ಕಪನಯ್ಯ ರವರ ಪತ್ನಿ ಶ್ರೀಮತಿ ಮಾದಮ್ಮ ಎಂಬುವವರಾಗಿದ್ದು, ಸದರಿಯವರಿಗೆ ಒಟ್ಟು 7 ಜನೆ ಮಕ್ಕಳಿರುತ್ತಾರೆ ದೂರುದಾರರನ್ನ ಒಳಗೊಂಡಂತೆ.
- ಶ್ರೀ ಮಾಧು ಬಿನ್ ಕಪನಯ್ಯ ರವರ ರವರ ಮರಣ ಹೊಂದಿದ ನಂತರ ಸದರಿ ಮೇಲ್ಕಂಡ 0.19 ಗುಂಟೆ ಜಮೀನು ಶ್ರೀಮತಿ ಮಾದಮ್ಮ ರವರ ಹೆಸರಿಗೆ ಮ್ಯುಟೇಷನ್ ಆಗಿರುವುದಿಲ್ಲ.
- ಸಂಗತಿಗಳೆಲ್ಲಾ ಹೀಗಿರುವಾಗ, ಶ್ರೀಮತಿ ಮಾದಮ್ಮ ರವರು ನೋಂದಾವಣಿಯಾಗದ ದಾನ ಪತ್ರದ ಮುಖಾಂತರ ದಿನಾಂಕ: 20/04/2010 ರಂದು, ದೂರುದಾರರ ಹೆಸರಿಗೆ 19 ಗುಂಟೆ ಪೈಕಿ ಪೂರ್ವ-ಪಶ್ಚಿಮ 50 ಅಡಿಗಳು ದಕ್ಷಿಣ-ಉತ್ತರ 60 ಅಡಿಗಳುಳ್ಳ ಜಾಗ ಮತ್ತು ಈ ಜಾಗದಲ್ಲಿ ಕಟ್ಟಿರುವ 5 ಚದರ ಕಲ್ನಾರ್ ಶೀಟೀನ ಮನೆಯನ್ನು ದಾನವಾಗಿ ನೀಡಿರುತ್ತಾರೆ. ಸದರಿ ದಾನ ಪತ್ರಕ್ಕೆ ಶ್ರೀಮತಿ ಮಾದಮ್ಮ ರವರು ಉಳಿದ 6 ಜನ ಮಕ್ಕಳ ಸಹಿಗಳನ್ನು ಮಾಡಿರುವುದಿಲ್ಲ.
- 4 ಮತ್ತು 5ನೇ ಎದುರುದಾರರುಗಳು ಮೇಲ್ಕಾಣಿಸಿದ ಅಂಶಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿದೇ ಏಕಾಏಕಿಯಾಗಿ ನೋಂದಾವಣಿಯಾಗದ ದಾನ ಪತ್ರದ ಆಧಾರದ ಮೇಲೆ ಕಾನೂನು ಬಾಹಿರವಾಗಿ ದೂರುದಾರರ ಹೆಸರಿಗೆ ಮೇಲ್ಕಂಡ ಪ್ರಶ್ನಿತ ಸ್ವತ್ತನ್ನು ನಮೂನೆ 11ಬಿ ಯನ್ನು ವಿತರಿಸಿರುವ ಮೂಲಕ ವರ್ಗಾಯಿಸಿ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '4 ಮತ್ತು 5ನೇ ಎದುರುದಾರರುಗಳ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '4 ಮತ್ತು 5ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

ದೂರಿನಂಶಗಳನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಸದರಿ ದೂರುದಾರರ ದೂರು ಅರ್ಜಿ ಮತ್ತು ಮಾನ್ಯ ಉಪಲೋಕಾಯುಕ್ತ ವರದಿಯಂತೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ಎದುರುದಾರರಾದ ಶ್ರೀ ಕೆ.ಸೋಮಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು) ಮತ್ತು ಶ್ರೀ ಹೆಚ್.ಸಿ.ರಾಜಣ್ಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, (ಹಾಲಿ ಕಾರ್ಯದರ್ಶಿ ಗ್ರೇಡ್-1, ಪ್ರಭಾರ ಗೋಪಾಲಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ) ಶ್ರೀರಾಂಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪ್ರಾಮಾಣಿಕತೆ,ಸಂಪೂರ್ಣ ನಿಷ್ಠೆ ತೋರದೆ, ಕರ್ತವ್ಯಲೋಪವೆಸಗಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957 ರ 14-ಎ ರನ್ವಯ ಎದುರುದಾರರ ವಿರುದ್ಧ ವಿಚಾರಣೆ ಮಾಡಲು ಈ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/447/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:16-06-2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಸೋಮಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು) ಮತ್ತು ಶ್ರೀ ಹೆಚ್.ಸಿ.ರಾಜಣ್ಣ, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, (ಹಾಲಿ ಕಾರ್ಯದರ್ಶಿ ಗ್ರೇಡ್-1, ಪ್ರಭಾರ ಗೋಪಾಲಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ) ಶ್ರೀರಾಂಪುರ ಗ್ರಾಮ ಪಂಚಾಯತಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 117 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
6. ಶ್ರೀ ಕೆ.ಸೋಮಯ್ಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬನ್ನಿಕುಪ್ಪೆ ಗ್ರಾಮ ಪಂಚಾಯತಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.
7. ಶ್ರೀ ಹೆಚ್.ಸಿ.ರಾಜಣ್ಣ, ದ್ವಿತೀಯ ದರ್ಜೆ ಸಹಾಯಕರು, ಪ್ರಭಾರ ಗ್ರೇಡ್-1 ಕಾರ್ಯದರ್ಶಿ, ಗೋಪಾಲಪುರ ಗ್ರಾಮ ಪಂಚಾಯತಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.